**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ.674/2024 ಪ್ರಾ.ಸಾ –3 ಚಾ.ಸಾ –1**

**ದಿನಾಂಕ: 18-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ಮಹೇಶ್ ಮಾಳಿ |
| ತಂದೆಯ ಹೆಸರು | : | ಈಶ್ವರ್ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ಪಿ ಎಸ್ ಐ<br>ರಾಬರ್ಟ್ಸನ್ ಪೊಲೀಸ್ ಠಾಣೆ ,<br>ಕೆ. ಜಿ ಎಫ್ |
| ವಾಸಸ್ಥಳ | : | ಕೆ ಜಿ ಎಫ್ |

**<u>ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ</u> :-**

ನಾನು ಜುಲೈ 2023 ರಿಂದ ಅಕ್ಟೋಬರ್ 2025 ರವರೆಗೆ ಕೆ.ಬಿ.ಕ್ರಾಸ್ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ: 24-03-2024 ರಂದು ಲೋಕ ಸಭಾ ಚುನಾವಣ ಸಮಯದಲ್ಲಿ ಗಸ್ತು ಕರ್ತವ್ಯದಲ್ಲಿದ್ದಾಗ ಚಾಸ—4 ಮತುತ 5 ರವರೊಂದಿಗೆ ಗಸ್ತು ತಿರುಗುತ್ತಿರುವಾಗ ಸುಮಾರು ಸಂಜೆ 7.00 ಗಂಟೆಗೆ ಒಂದು ಬಾತ್ಮಿ ಬದಿದ್ದು ಕಲ್ಲು ಶೆಟ್ಟಿಹಳಿ ಗ್ರಾಮದಲ್ಲಿ ಗಂಗಾಧರಯ್ಯ ರವರ ಮನೆಯ ಮುಂದೆ ಪ್ಲಾಸ್ಟಿಕ್ ಚೀಲದಲ್ಲಿ ಗಂಗಾಧರಯ್ಯ ಎಂಬುವರು ಅಕ್ರಮವಾಗಿ ಮದ್ಯ ಮಾರಾಟ ಮಾಡುತಿದ್ದಾರೆ ಎಂಬ ಮಾಹಿತಿ ಬಂದಿರುತ್ತದೆ.

ಸದರಿ ಬಾತ್ಮೀ ವಿಷಯವನು ಚಾಸ—2 ಮತ್ತು 3 ರವರಿಗೆ ತಿಳಿಸಿ ಪಂಚರನ್ನಾಗಿ ಬರಮಾಡಿಕೊಂಡು ಅವರೊಂದಿಗೆ ಕಲ್ಲುಶಟ್ಟಿ ಹಳ್ಳಿ ಗ್ರಾಮಕ್ಕೆ ಇಲಾಖಾ ಜೀಪಿನಲ್ಲಿ ಹೋಗಿದ್ದು ಅಲ್ಲ ಸ್ವಲ್ಪ ದೂರಿನಲ್ಲಿ ವಾಚ್ ಮಾಡುತ್ತಿದ್ದು ನಂತರ ನಾವೆಲರೂ ಆತನ ಬಳಿ ನೆಡೆದುಕೊಂಡು ಹೋಗುತ್ತಿದ್ದಾಗ ಸಮವಸ್ತ್ರದಲ್ಲಿದ್ದ ನಮ್ಮನ್ನು ಆತನು ನೋಡಿ ಓಡಿ ಹೋಗಿರುತ್ತಾನೆ. ಆಗ ನಮ್ಮ ಸಿಬ್ಬಂದಿಯಾದ ಚಾಸ—4 ಮತ್ತು 5 ರವರಿಗೆ ಆತನನನ್ನು ಹಿಡಿಯಲು ತಿಳಿಸಿದ್ದು ಅವರು ಅತನನ್ನು ಹಿಡಿದಿರುತ್ತಾರೆ. ನಂತರ ಆತನ ಹೆಸರು

ವಿಳಾಸವನುನ ಪಂಚರ ಸಮಕೆಮ ವಿಚಾರಿಸಲಾಗಿ ಗಂಗಾಧರಯ್ಯ ಬಿನ್ ಚಿಕ್ಕವೀರಾಚಾರ್ ಎಂದು ತಿಳಿಸಿದರು. ಆತನ ಬಳಿ ಇದ್ದ ಪ್ಲಾಸ್ಟಿಕ್ ಚೀಲ ಪರಿಶೀಲಿಸಲಾಗಿ ಅದರಲ್ಲಿ 90 ಎಂ ಎಲ್ 37 ಓರಿಜನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳು ಇದ್ದವು. ಆತನ ಬಳಿ ಪರವಾನಿಗೆ ಇದೆಯಾ ಎಂದುಕೇಳಲಾಗಿ ಆತನು ಇಲ್ಲ ಎಂದು ತಿಳಿಸಿರುತಾನೆ. ಅವುಗಳನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡು ಪಂಚನಾಮೆ ಕ್ರಮ 7.45 ರಿಂದ 9.00 ರವರೆಗೆ ಜರುಗಿಸಿ ನಮ್ಮ ಮತ್ತು ಪಂಚರ ಸಹಿಯನ್ನು ಪಡೆದಿರುತ್ರೇನೆ. ಟೆಟ್ರಾ ಪ್ಯಾಕೇಟುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ಕೆ ಎಂಬ ಅಕ್ಷರದಿಂದ ಸೀಲು ಮಾಡಿ ಪಂಚರ ಸಹಿಯುಳ ಚೀಟಿಯನ್ನು ಅಂಟಿಸಿರುತ್ತೇವೆ. ಸದರಿ ಚೀಟಿಯ ಮೇಲೆನನ್ನ ಸಹಿ ಕೂಡಾ ಇದೆ.

ಸದರಿ ಸ್ಥಳ ಚಕ್ಕುಬಂದಿಃ ಪೂ- ಅರಳೀಕೆಟ್ಟೆ , ಪ- ಸರ್ಕಾರಿ ಕಟ್ಟೆ , ಉ- ಮಲ್ಲಾಚಾರ್ ರವರ ಜಮೀನು , ದ- ಕರಿಯಮ್ಮದೇವಸ್ಥಾನಕ್ಕೆ ಹೋಗುವ ರಸ್ತೆ .

ನಂತರ ಸಿಕ್ಕಮಾಲುಗಳನ್ನು ಆರೋಪಿತರೊಂದಿಗೆ ಕೆ. ಬಿ ಕ್ರಾಸ್ ಠಾಣೆಗೆ ಹಾಜರಾಗಿ ವರದಿಯನ್ನು ನೀಡಿರುತ್ತೇನೆ.

ಸಾಕ್ಷಿಯು ನಿಪಿ-2 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-1 ರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ಕಡತದಲ್ಲಿರುವ ವರದಿಯನ್ನು ನೋಡಿ ಗುರುಸಿತಿದ್ದು ಅದನ್ನು ನಿಪಿ-5 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಒಂದು ಬಿಳಿ ಚೀಲವನ್ನು ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದಿರುವ ಪ್ರತ್ಯೇಕವಾಗಿ ಪ್ಯಾಕ್ಮಾಡಿ ಸೀಲುಮಾಡಿರುವ 90 ಎಂ ಎಲ್ 37 ಓರಿಜನಲ್ ಚಾಯ್ಸ ವಿಸ್ಕಿಯ ಟೆಟ್ರಾ ಪ್ಯಾಕೇಟುಗಳನ್ನು ನೋಡಿ ಗುರುತಿಸಿದ್ದು ಅವುಗಳ್ನು ಒಟ್ಟಾಗಿ ಮು.ಮಾ.2 ಎಂದು ಗುರುತಿಸಲಾಯಿತು. ಸಾಕ್ಷಿ ಮು. ಮಾ.2 ರ ಮೇಲೆ ಅಂಟಿಸಿರುವ ಚೀಟಿಯಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ.

ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿತನನ್ನು ನೋಡಿ ಗುರುತಿಸಿರುತ್ತಾರೆ .

**ಪಾಟೀ ಸವಾಲು : ಆರೋಪಿ ಪರ ಶ್ರೀಮತಿ ಯು .ಡಿ ಕೆ ವಕೀಲರಿಂದ :-**

ನಾವು ಗಸ್ತಿಗೆ ಠಾಣೆಯನ್ನು ಬಿಡುವಾಗ ಸಮಯ ಎಷ್ಟಾಗಿತ್ತು ಎಂದು ನೆನಪಿಲ್ಲ. ಬಾತ್ಮಿದಾರರ ಹೆಸರನ್ನು ತಿಳಿಸುವಂತಿಲ್ಲ. ನಮಗೆ ಬಾತ್ಮಿ ಕಂಡ ಬಗ್ಗೆ ಠಾಣಾ ದಿನಚರಿ ಪುಸ್ತಕದಲ್ಲಿ ನಮೂದು ಮಾಡಿರುತ್ತೇನೆ ಅದನ್ನು ಹಾಜರುಪಡಿಸಲು ಯಾವುದೇ ತೊಂದರೆ ಇಲ್ಲ. ನಾವು ಠಾಣೆಯನ್ನು ಬಿಟ್ಟು ಬಿಳಿಗೆರೆ ಮತ್ತು ತಿಮ್ಲಾಪುರದಲ್ಲಿ ಗಸ್ತು ತಿರುಗುತ್ತಿದ್ದೆವು ಆಗ ಬಾತ್ಮಿ ಬಂದಿರುತ್ತದೆ . ನಾವು 2 ಜಾಗದಲ್ಲಿ ಗಸ್ತನ್ನು ಸುಮಾರು 2 ರಿಂದ 3 ನಿಮಿಷ ಮಾಡಿರುತ್ತೇವೆ. ತಿಮ್ಲಾಪುರದಿಂದ ಕಲ್ಲು ಶಟ್ಟಿಹಳ್ಳಿ ಸುಮಾರು 8 ಕಿ ಮೀ. ಇದೆ ಅಲ್ಲಿಗೆ ಹೋಗಲು 25 ನಿಮಿಷ ಅಗುತ್ತದೆ . ನಾವು ಗಸ್ತಿಗೆ ಹೋಗುವ ಪೂರ್ವದಲ್ಲಿ ದಿನಚರಿ ಪುಸ್ತಕದಲ್ಲಿ ನಮೂದು ಮಾಡುತ್ತೇವೆ . ಘಟನೆ ಆಯಿತು ಎಂದು ಹೇಳುವ ಸ್ಥಳದಲ್ಲಿ ದೇವಸ್ಥಾನ ಇರುವ ಕಾರಣ ಬಹಳಷ್ಟು ಜನ ಓಡಾಡುತ್ತಿರುತ್ತಾರೆ ಎಂದರೆ ಸ ರಿ . ನಾನು ಚಾಸಾ-2 ಮತು 3 ರವರಿಗೆ ನೋಟೀಸು ನೀಡಿ ಕರಡಿ ಕೋಡಿಯಿಂದ ಕರೆದುಕೊಂಡು ಬಂದಿರುತ್ತೇನೆ. ಚಾಸಾ-2 ಮತ್ತು 3 ನಮ್ಮ ಠಾಣೆಗೆ ಖಾಯಂ ಸಾಕ್ಷಿದಾರರಾಗಿರುತ್ತಾರೆ ಎಂದರೆ ಸ ರಿಯಲ್ಲ. ಬಾತ್ಮಿದಾರರ ಮಾಹಿತಿಯಂತೆ ಸ್ಥಳವನ್ನು ನಿಖರವಾಗಿ ಯಾರು ತೋರಿಸಿರುತಾರೆ ಎಂದರೆ ಸಾಕ್ಷಿ ನವೇ ಅಲ್ಲಿಗೆ ಹೋಗಿದ್ದೆವು ಎಂದು ನುಡಿಯುತ್ತಾರೆ. ಜಪ್ತು ಪಡಿಸಿಕೊಂಡಂತಹ ಮಾಲುಗಳನ್ನು ಸ್ಥಳದಲ್ಲೇ ಸೀಲು ಮಾಡಿರುತ್ತೇವೆ. ಪಂಚರ ಸಹಿಯನು ಸ್ಥಳದಲೇ ಪಡೆದಿರುತ್ತೇವೆ. ಆರೋಪಿಯು ಮದ್ಯವನ್ನು ಮಾರಾಟ ಮಾಡುತ್ತಿರುವುದನು ನೀವು ನೋಡಿದಿರಾ ಎಂದರೆ ಸಾಕ್ಷಿಯು ಆತನು ಹೊರಗೆ ನಿಂತಿದ್ದರು, ಆದರೆ ಮದ್ಯ ಮಾರಾಟ ಮಾಡುವುದನ್ನು ನಾನು ನೋಡಿಲ್ಲ. ನಾನು ರಾತ್ರಿ 9.30 ಗಂಟೆಗೆ ಠಾಣೆಗೆ ಬಂದು ಜಪ್ತಿಪಡಿಸಿಕೊಂಡಂತಹ ಮಾಲುಗಳನ್ನು ತಂದು ಹಾಜರುಪಡಿಸಿರುತ್ತೇನೆ. ಆ ಕಾಲಕ್ಕೆ ಸಾರ್ವಜನಿಕರು ಯಾರು ಇರಲಿಲ್ಲ. ಗ್ರಾಮಸ್ಥರನ್ನು ಸಾಕ್ಷಿದಾರರನ್ನಾಗಿ ಮಾಡಲು ಯಾವುದೇ ತೊಂದರೆ ಇತ್ತಾ ಎಂದರೆ ಅಲ್ಲಿ ಯಾರು ಇರಲಿಲ್ಲ ಎಂದು ನುಡಿಯುತ್ತಾರೆ.

ನಾನು ಆ ದಿನ ಚಾಸಾ- 4 ಮತ್ತು 5 ರವರೊಂದಿಗೆ ಗಸ್ತು ತಿರುಗುತ್ತಿರಲಿಲ್ಲ, ನನಗೆ ಯಾವೋ ಬಾತ್ಮೀ ಬಂದಿರಲಿಲ್ಲ ಮತ್ತು ನಾವು ಚಾಸಾ-2 ಮತ್ತು 3 ರವರೊಂದಿಗೆ ಘಟನೆ ಆಯಿತು ಎಂದು ಹೇಳುವ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ಅಲ್ಲಿ ಆರೋಪಿತನು ಯಾವುದೇ ಮದ್ಯದ ಟೆಟ್ರಾ ಪ್ಯಾಕೇಟುಗಳನ್ನು ಹಿಡಿದು ಮಾರುತ್ತಿರಲಿಲ್ಲ , ಆತನನ್ನು ನಾವು ಹಿಡಿದಿರಲಿಲ್ಲ. ಮತ್ತು ಅತನ ವಶದಿಂದ ಮು,ಮಾ.1 ಮತ್ತು 2ನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಮು.ಮಾ.2 ರ ಮೇಲಿರುವ ಪಂಚರ ಸಹಿಯನ್ನು ಠಾಣೆಯಲ್ಲಿ ಮಾಡಲಾಗಿದೆ ಎಂದರೆ ಸರಿಯಲ್ಲ. ಪಂಚನಾಮೆಯಲ್ಲಿ ಮ್ಯಾನುಫ್ಯಾಕ್ಚರಿಂಗ್ ಡೇಟ್ ಮತು ಬ್ಯಾಚ್ ನಂಬರನು ನಮೂದು ಮಾಡಿಲ್ಲ, ಮು.ಮಾ 2 ರಂತಹ ಟೆಟ್ರಾ ಪ್ಯಾಕೇಟುಗಳು ಎಲ್ಲಾಕಡೆ ಸಿಗುತ್ತವೆ ಎಂದರೆ ನಾವು ಅಮಾನತ್ತುಪಡಿಸಿಕೊಂಡಂತಹ ಮುದ್ದೆ ಮಾಲುಗಳು ಸಿಗುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತನು ಯಾವುದೇ ತಪ್ಪು ಮಾಡದೇ ಇದ್ದರೂ ಸಹ ನಮ್ಮ ಠಾಣೆಯ ಅಂಕಿ ಸಂಖ್ಯೆ ಗಳಿಗೋಸರ ಸುಳ್ಳು ದೂನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸ ರಿಯಲ್ಲ.

**<u>ಮರು ವಿಚಾರಣೆ : ಇರುವುದಿಲ್ಲ.</u>**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**SD/-**
**ಪ್ರಧಾನ ಸಿವಿಲ್ ನ್ಯಾಯಾಧೀಶರು, ತಿಪಟೂರು.**